Regd No M 1299 Sri ತಾ|| 16—11—51

SATYAVADI = 35th Year

ಸತ್ಯವಾದಿ

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ಎ ಸುಬ್ರಾಯರು [ಬಿಡಿ ಪ್ರತಿ 3 ನೈ

ನಗರದ ಕೆ. ಎಂ. ಪಿ. ಪಾರ್ಟಿ ವಿಸರ್ಜನೆಯಾಗಿದ್ದು ಸುಳ್ಳು

ಮೈಸೂರು ನಗರದ ಕೆ ಎಂ. ಪಿ ಪಾರ್ಟಿ ವಿಸರ್ಜನೆಯಾಗಿ ಸೋಷಲಿಸ್ಟ್ ಪಕ್ಷಕ್ಕೆ ಸೇರಿದೆಯೆಂದು ಇತ್ತೀಚೆಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿ ಸುಳ್ಳು ಮತ್ತು ನಿರಾಧಾರವಾದುದು. ನಗರದ ಕೆ. ಎಂ ಪಿ ಪಾರ್ಟಿ ಕಾರ್ಯನಿರ್ವಾಹಕ ವಂಡಲಿಯೊಡನೆ ವ್ಯವಸ್ಥೆಗೊಂಡು ಕಾರ್ಯಕಲಾಪಗಳನ್ನು ನಡೆಸುತ್ತಿದೆ ಎಂಬುದಾಗಿ ಪಾರ್ಟಿ ಕಾರ್ಯದರ್ಶಿಗಳು ತಿಳಿಸುತ್ತಾರೆ.

ನೆಹರು ಭಾರತದ ಚೆಚೆರ್ಲ್

ಭಾರತ ಕಾಂಗ್ರೆಸ್ ಬ್ರಿಟಿಷ್ನಿನ ಕನ್ಸರ್ವೆಟೀವ್ ಪಾರ್ಟಿಯಂತಿದೆ - ಪಂ|| ನೆಹರು ಚರ್ಚಿಲ್'ನಂತಿದ್ದಾರೆ ಎಂದು ಶ್ರೀ ಜಯಪ್ರಕಾಶನಾರಾಯಣ್ ತಿರುವೇಂದ್ರಂನಲ್ಲಿ ತಿಳಿಸಿದರು

ಕಮ್ಯುನಿಸ್ಟ ಪತ್ನಿಯಾದ

ಮತಾಯಾದಿಯಲ್ಲಿ ತಮ್ಮ ಹೆಸರು ಪತ್ನಿ ಹಚ್ಚುತ್ತಿದ್ದಾಗ ಕಮ್ಯುನಿಸ್ಟ್ ಪಕ್ಷದ ಶ್ರೀ ಎಸ್. ವಿ ಪರುಳೇಕರ್ ನನ್ನನ್ನೆ ಬೊಂಬಾಯಿನಲ್ಲಿ ಸಿಕ್ಕಿದರು. 47 ನೇ ಇಸವಿ ಏಪ್ರಿಲಿನಿಂದ ಇವರು ನಾಪತ್ತೆಯಾಗಿದ್ದರು.

ಈ ದಿನದಿಂದ ಮೆದಂತಾಸಿನ ಹದಿನೈದು ಲಕ್ಷ ವಂದಿಗೆ ನೀರಿನ ಸಂಬಂಧಾಜಿನಲ್ಲಿ ಮತ್ತಷ್ಟು ಜೋತಾ ಮಾಡಲಾಗುವದೆಂದು ಕಾರ್ಪೋರೇಷನ್ ಕಮಿಷನರು ತಿಳಿಸಿದ್ದಾರೆ

ಫಿಲಿಪೈನ್ಸಿನಲ್ಲಿ ನಡೆದ ಚುನಾವಣೆ ಸಂಬಂಧದಲ್ಲಿ ಮಾವತ್ತು ಮಂದಿ ಸತ್ತಿದ್ದಾರೆಂದು ರಮ್ಯಾಸಿಲಾ ವಾರ್ತೆ.

ದಿವ್ಯವಾಣಿ

ಜಗತ್ತಿನಲ್ಲಿ ಸಾಹಸವೊಂದಿಲ್ಲದಿದ್ದರೆ ಸಂಶೋಧನೆಗಳೇ ನಡೆಯುತ್ತಿಂಲಿಲ್ಲ

— ಜಾರ್ಜರಸೆಲ್

ವಿಶ್ವ ಆರೋಗ್ಯ ಸಂಸ್ಥೆಯ ಸಾಸಾರ ಯೋಜನೆ ಸಲಹೆಗಾರ ಡಾ|| ಅಬ್ರಹಾಂ ಸ್ಪೋಕ್ ನಾಗಪುಂದಲ್ಲಿ ಮೊನ್ನೆ ಹೇಳಿಕೆಯಿತ್ತು ರಿದಂ ಕ್ರವದ ಗರ್ಭ ನಿರೋಧ ಭಾರತೀಯರಿಗೆ ಸಂಮತವಿದೆಯೆ ಎಂಬುದನ್ನು ದೆಹಲಿ, ಕಲ್ಕತ್ತಾ ಮತ್ತು ಬೆಂಗಳೂರಿನಲ್ಲಿ ಪರೀಕ್ಷಿಸುವದಾಗಿ ತಿಳಿಸಿದರು

ತಿರುವನಂತಪುಂದ ವಾರ್ತೆ ಪ್ರಕಾಶ ಪರಸ್ಪರ ಸಹಕಾರ ಸಂಘದ ರಿಜಿಸ್ಟ್ರಾರರಾದ ಶ್ರೀ ಜಿ ಆರ್. ಪಿಳ್ಳೆಯವರನ್ನು ಕೆಲಸದಿಂದ ರದ್ದು ಮಾಡಲಾಗಿದೆ ಹಣ ದುರುಪಯೋಗ ಮಾಡಿದರೆಂಬುದೇ ಅವರ ಮೇಲಿನ ಆರೋಪ.

ವಿಜಯವಾಡಾದಲ್ಲಿ ಸಮಾವೇಶವಾಗಿದ್ದ ಆಂಧ್ರ ಕಮ್ಯುನಿಸ್ಟ್ ಪಕ್ಷದ ಅಧಿವೇಶನ ಕೂಡಲೇ ಆಂಧ್ರಪ್ರಾಂತ ರಚನೆಯಾಗಬೇಕೆಂಬ ಒತ್ತಾಯ ಪೂರ್ವಕ ನಿರ್ಣಯ ಅಂಗೀಕರಿಸಿದೆ.

ಪೋನದಿ ಪ್ರವಾಹವೆದ್ದು ಉತ್ತರ ಇಟಲಿಯಲ್ಲಿ ಅಪಾರ ನಷ್ಟವುಂಟಾಗಿದೆಯೆಂದು ವಿಲಾರ್ ವಾರ್ತೆ. ಕಾಲು ಲಕ್ಷ ಎಕರೆ ಭೂವಿ ವುಳುಗಿದೆ ಐವತ್ತು ಮಂದಿ ಸತ್ತಿದ್ದಾರೆ.

ಪರೀಕ್ಷೆ ಫಲತಾಂಶ

ಮೈಸೂರು ವಿಶ್ವವಿದ್ಯಾನಿಲಯದ ಸಪ್ಟೆಂಬರ್ ಪರೀಕ್ಷೆಗಳ ಫಲಿತಾಂಶಗಳು ನವಂಬರ್ 20 ನೆಯ ತಾರೀಖಿಗೆ ಮುಂಚೆ ಬಹಿರಂಗವಾಗುವ ಸಂಭವವಿಲ್ಲವೆಂದೂ ನವಂಬರ್ 20 ರಿಂದ 25 ನೇ ತಾರೀಖಿನೊಳಗೆ ಪ್ರಕಟವಾಗಬಹುದೆಂದೂ ಖಚಿತವಾಗಿ ತಿಳಿದುಬಂದಿದೆ

ಪಂಡಿತ' ನೆಹರು ಚುನಾವಣೆ ಪ್ರಚಾರ ಪ್ರಾರಂಭ ಮಾಡಿದರು

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಪಂ|| ಜವಾಹರಲಾಲ್ ನೆಹರು ನಿನ್ನೆ ದಿನ ಪರ್ತಕೋಟೆಯಲ್ಲಿ ಅರ್ಧ ಲಕ್ಷ ಜನರ ಬಹಿರಂಗ ಸಭೆಯಲ್ಲಿ ಪ್ರಪ್ರಥಮ ಚುನಾವಣೆ ಕಾಂಗ್ರೆಸ್ ಚುನಾವಣಾ ಭಾಷಣವನ್ನು ಪ್ರಾರಂಭಿಸಿದರು. ಸ್ವಲ್ಪ ಹೊರ್ಬಲ್ಯದಿಂದ ಕಾಂಗ್ರೆಸ್ ನರಳಿದಾಗ್ಯೂ, ಕಾಂಗ್ರೆಸ್ ಪ್ರಗತಿಗಾಗಿ ದುಡಿಯುತ್ತಿರುವ ಅತ್ಯಂತ ವೃದ್ಧ ಸಂಸ್ಥೆ ಎಂದು ಪಂ|| ನೆಹರು ತಿಳಿಸಿದರು. ಕಾಂಗ್ರೆಸಿಗೆ ಕೊಡುವ ಪ್ರತಿಯೊಂದು ಓಟೂ ದೇಶವನ್ನು ದುರ್ಬಲಗೊಳಿಸಿದ ಕೋಮು ಭಾವನೆ ವಿರುದ್ಧ ಕೊಟ್ಟ ಓಟು, ಜಾತ್ಯತೀತ ತತ್ವಕ್ಕೆ ಕೊಟ್ಟ ಓಟು ಎಂದು ಕಾಂಗ್ರೆಸ್ ಅಧ್ಯಕ್ಷರು ತಿಳಿಸಿದರು.

ಜಯಪ್ರಕಾಶರ ಭಾಷಣ

ಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ಜಯಪ್ರಕಾಶನಾರಾಯಣರು ನಾಳೆ ಸಂಜೆ ಮಿಸೂರು ಟೌನ್‌ಹಾಲ್ ಮೈದಾನದಲ್ಲಿ ಭಾಷಣ ಮಾಡಲಿದ್ದಾರೆ.

ಅಣು ಪ್ರಯೋಗ ಶಾಲೆ

ಲಾಹೋರಿನಲ್ಲಿ ಅಣು ಪ್ರಯೋಗ ಶಾಲೆಯನ್ನು ಪಾಕಿಸ್ತಾನ ಸರ್ಕಾರ ಬರುವ ವರ್ಷದ ಕೊನೇ ಹೊತ್ತಿಗೆ ತೆರೆಯಲಿದೆ

ಫಾಸಿ

ಗಂಡನನ್ನು ವಿಷಕೊಟ್ಟು ಕೊಂದ ತಪ್ಪಿಗೆ ರಾಜವರಪಲ್ಲಿಯ ರಾಮಕ್ಕ ಎಂಬ ವಳಿಗೆ ಫಾಸಿ ಶಿಕ್ಷೆ ವಿಧಿಸಲಾಯಿತೆಂದು ಕೋಲಾರ ವಾರ್ತೆ.

ದಂಡ

ಕಮಲಾ ಎಂಬವಳು ಮೈಸೂರು ಲಷ್ಕರ್ ಮೊಹಲ್ಲದಲ್ಲಿ ವೇಶ್ಯಾ ಗೃಹ ನಡೆಸುತ್ತಿದ್ದ ತಪ್ಪಿಗೆ ರೂ. 40 ದಂಡ ವಿಧಿಸಲಾಯಿತು.

ರಜಾ ವದಂತಿ

ನಿರಾಧಾರವಾದ್ದು

ಮುಂದಿನ ಮಾಹೆ ತಾ|| 24 ರಿಂದ 1 ತಿಂಗಳ ಕಾಲ ಮುಂಬರುವ ಮಹಾ ಚುನಾವಣೆ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ವಿದ್ಯಾ ಸಂಸ್ಥೆಗಳಿಗೆ ಒಂದು ತಿಂಗಳ ಕಾಲ ರಜ ಕೊಡಲಾಗುವದೆಂಬ ವದಂತಿಗಳು ನಿರಾಧಾರವಾದುದೆಂದೂ ಅಂಥಾ ಸಲಹೆಗಳು ಸರ್ಕಾರದ ಮುಂದಿಲ್ಲವೆಂದೂ ಗೊತ್ತಾಗಿದೆ.

ವಾರ್ತೆಗಳು

ಭದ್ರತಾ ಸಮಿತಿಯಲ್ಲಿ ಪಾಕಿಸ್ತಾನಕ್ಕೆ ಸ್ಥಾನ ದೊರಕಲು ಭಾರತ ಬೆಂಬಲಿಸುವದೆಂದು ದೆಹಲಿ ವರದಿ.

ಸರ್ದಾರ ಪಣಿಕ್ಕರರು ಶ್ರೀ ಬಿ ಎನ್ ರಾಯರ ಸ್ಥಾನದಲ್ಲಿ ವಿಶ್ವಸಂಸ್ಥೆಯಲ್ಲಿ ಭಾರತದ ಸ್ಥಿರ ಪ್ರತಿನಿಧಿಯಾಗಿ ನೇಮಿತರಾಗುವರೆಂದು ಪೇರಿಸಿನ ವಾರ್ತೆ.

ಕಾಂಗ್ರೆಸ್ ಮತ್ತು ಸೋಷಲಿಸ್ಟರ ನೀತಿಗೆ ವ್ಯತ್ಯಾಸವಿರುವದಾಗಿ ಶ್ರೀ ಜಯಪ್ರಕಾಶರು ಮೊನ್ನೆ ಮಧುರಾದಲ್ಲಿ ತಿಳಿಸಿದರು

ಹಾಂಕಾಂಗಿನಲ್ಲಿ ಪ್ರತಿನಿತ್ಯ ಜನತೆಗೆ 5 ಗಂಟೆ ಕಾಲ ಮಾತ್ರ ನೀರು ಬಿಡಲಾಗುವದೆಂದು ತಿಳಿಸಲಾಗಿದೆ

ಅಮೇರಿಕಾ ಪರ್ಷಿಯಕ್ಕೆ ಸಾಲಕೊಡುವ ಯತ್ನ ವಿಫಲವಾಯಿತು ತೈಲದಿಂದ ಬರುವ ಉತ್ಪನ್ನವನ್ನು ಕೊಡುವದಾಗಿ ಪರ್ಷಿಯಾ ತಿಳಿಸಿದರೂ ಪ್ರಯೋಜನವಾಗಲಿಲ್ಲ.

ಅಪೇರಾ ಟಾಕೀಸಿನಲ್ಲಿ

— ಇಂದಿನಿಂದ —

ರಾಮ ವಿವಾಹ

ಜುಯೆಪ್ರದ 2ನೇ ವಾರ

ವಿಸೂ — ಹಿಂದಿನ ಪುಟದಲ್ಲಿ ಪ್ರಕಟಿಸಿರುವ ಜಾಹಿರಾತಿನಂತೆ ಬಿಜ್ಲಿ ಪ್ರದರ್ಶನವಿಲ್ಲ

ಕಳ್ಳ ಸಂತೆಯಲ್ಲಿ ಮದ್ಯದ ರಮಣೆ

ಬ್ರಿಟೈನಿನ ಸ್ಕಾಚ್ ವಿಸ್ಕಿ ತಯಾರಿಸುವ ಸಂಘದವರು ಪ್ರಕಟಿಸುವ ಸಂಘದವರು ಪ್ರಕಟಿಸಿದ ಇತ್ತೀಚಿಗಿನ ಒಂದು ವರದಿಯ ವೇಲಿಂದ ತಿಳಿದುಬರುವಂತೆ 1951 ನೇ ಮಾರ್ಚ್ 31 ಕ್ಕೆ ಅಂತ್ಯವಾಗುವ ವರ್ಷದಲ್ಲಿ ಭಾರತದ ಫ್ರೆಂಚ್ ಮತ್ತು ಪೋರ್ಚುಗೀಸ್ ವಸಾಹತುಗಳಿಗೆ 3753 ಪೆಟ್ಟಿಗೆಗಳಷ್ಟು ವಿಸ್ಕಿ ರವಾನೆಯಾಗಿರುವದಾಗಿ ತಿಳಿದುಬರುತ್ತದೆ. ಫ್ರೆಂಚ್ ವಸಾಹತುಗಳಿಗೆ ಅಕ್ಕ ಪಕ್ಕದಲ್ಲಿರುವ ಮುಂಬಾಯಿ ಮತ್ತು

ಮದರಾಸು ಸಂಸ್ಥಾನಗಳಲ್ಲಿ ಮುಖ್ಯ ನಿ ಶೇಧವು ಜಾರಿಯಾಗುವ ಹಿಂದಿನ ವರ್ಷಗಳಲ್ಲಿ ಎಂದರೆ 1946-47 ಮತ್ತು 47-48 ರಲ್ಲಿ ವೀಲೆ ಸೂಚಿಸಿದ ವಸಾಹತುಗಳಿಗೆ ರವಾನೆಯಾದ ವಿಸ್ಕಿ ಬರೇ 371 ಮತ್ತು 307 ಪೆಟ್ಟಿಗೆಗಳಷ್ಟಾಗಿತ್ತು.

ಸ್ಕಾಚ್ ವಿಸ್ಕಿಯ ಜೊತೆಯಲ್ಲಿ ಸುಮಾರು ೮ ಸಾವಿರದಿಂದ ೧೦ ಸಾವಿರ ಪೆಟ್ಟಿಗೆಗಳವರೆಗೆ ಫ್ರೆಂಚ್ ಮತ್ತು ಪೋರ್ಚುಗೀಸು ಮಾದಕ ಪದಾರ್ಥಗಳು ಭಾರತದ ಪುದುಚೇರಿ, ಕಾರೈಕಲ್, ಗೋವೆ, ದಾಮನ್ ಮತ್ತು ದೀವು ಬಂದರುಗಳಿಗೆ ಮಾರ್ಚ್ ೩೧ ಕ್ಕೆ ಅಂತ್ಯವಾಗುವ ವರ್ಷದಲ್ಲೇ ರವಾನೆಯಾಗಿವೆ.

ಇದರ ಜೊತೆಯಲ್ಲಿ ಫ್ರೆಂಚು ಮತ್ತು ಪೋರ್ಚುಗೀಸು ವಸಾಹತುಗಳಲ್ಲೇ ತಯಾರಾದ ದೇಶೀ ಮಾಲು ಪ್ರತ್ಯೇಕವಿದೆ : ಇದಿಷ್ಟು ಮದರಾಸು ಗುಟ್ಟಿನಲ್ಲಿ ಮುಂಬಾಯಿ ಮತ್ತು ಮದರಾಸುಗಳಿಗೆ ಸಾಗಿಸಲ್ಪಟ್ಟು, ಒಂದಕ್ಕೆ ಹತ್ತು ಇಪ್ಪತ್ತು ಪಾಲು ಹೆಚ್ಚಿಗೆ ದರದಲ್ಲಿ ಕಳ್ಳ ಸಂತೆಗೆ ಮಾರಾಟವಾಗಿ ಹೋಗುತ್ತದೆ; ಸುಮಾರು ಆರೇಳು ಕೋಟಿ ರೂಪಾಯಿ ಗಳಷ್ಟು ಮಾದಕ ದ್ರವ್ಯಗಳು ಮದ್ಯ ನಿಷೇಧ ಜಾರಿಯಿರುವ ಮುಂಬಯಿ ಮತ್ತು ಮದರಾಸುಗಳಲ್ಲಿ ಇಂಗಿಹೋಗುತ್ತಿವೆಯೆಂದು ಸೆಂಟ್ರಲ್ ಎಕ್ಸೈಜು ಮತ್ತು ಕಸ್ಟಂಸು ಸಿಐಡಿಗಳು ಅಂದಾಜು ಮಾಡಿರುತ್ತಾರೆ

ಒಂದು ಬಾಟಲು ಸ್ಕಾಚ್ ವಿಸ್ಕಿಗೆ ಮದರಾಸು ಮತ್ತು ಬೊಂಬಾಯಿಗಳಲ್ಲಿ ೬೦ ರಿಂದ ೧೦೦ ರೂಪಾಯಿವರೆಗೆ ಬೆಲೆ ಬರುತ್ತದೆ ; ಕಂದೇಶದಿಂದ ಗೋವೆ ಇಲ್ಲವೆ ಪುದುಚೇರಿ ಬಂದರಿಗೆ ಅದು ಸಾಗಾಟವಾಗಿ, ಬಂದು ಜಕ್ಕುವ ಒಟ್ಟು ಖರ್ಚು ೧೦ ರೂಪಾಯಿ ಮಾತ್ರ: ಪೋರ್ಚುಗೀಸು ಮತ್ತು ಫ್ರೆಂಚು ಧನ ಕುಬೇರರು ಕಳೆದ ಮೂರು ವರ್ಷಗಳಿಂದ ಇಂತಹ ದೇ ಗುಟ್ಟಿನ ವ್ಯಾಪಾರ ಮಹಿಮಾಭ್ಯು ನಡೆಸಿ ಕೋಟಿಗಟ್ಟಲೆ ಲಾಭ ಗಳಿಸಿದ್ದಾರೆ : ಹಾಗಾಗಿಯೇ ಭಾರತ ಬಿಟ್ಟಹೋಗಲು ಅವರಿಗೆ ಮನಸ್ಸು ಬರುವುದೇ ಇಲ್ಲ ಭಾರತದಲ್ಲಿಯೇ ತಮ್ಮ ಸ್ಥಾನಮಾನಗಳನ್ನು ಮತ್ತಷ್ಟು ಭದ್ರಪಡಿಸಲು ಅವರು ಯತ್ನಿಸುತ್ತಿದ್ದಾರೆ : ಫ್ರೆಂಚ್ ಮತ್ತು ಪೋರ್ಚುಗೀಸು ವಸಾಹತಿಗಳು ಭಾರತದೊಡನೆ ಸೇರ್ಪಡೆಯಾಗಬಾರದೆಂದು ಚಳುವಳಿಸುವವರಿಗೆ ತುಂಬಾ ಪ್ರೋತ್ಸಾಹ ಈ ಲಾಭಬಡಕರ ಕಡೆಯಿಂದ ದೊರೆಯುತ್ತದೆ. [ಪ್ರ. ಮಂ.

ಐ. ಟಿ. ಎಲ್. ಗ್ರೈಪ್ ಸಿರಪ್



ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅವ್ಯರ್ಥವಾದ

— ತಯಾರಕರು —
ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಐ.ಟಿ.ಎಲ್ ಗ್ರೈಪ್ ಸಿರಪ್

ರಣಜಿತ್ 16-11-51 ರಿಂದ
ಏಕ್ ನಜರ್ Ek Nazar
ತಾರಾಗಣ— ನಳಿನಿ ಜಯವಂತ್, ರೆಹನಾ, ಕರ್ಣದಿವಾಕರ್, ಗೋಪ್
ಮನಮೋಹಕ ಹಿಂದಿ ಚಿತ್ರ [ಪ್ರತಿ ದಿನ 3 ಆಟಗಳು
ಬೀಗಿನ ಪ್ರದರ್ಶನ 16-11-51 ರಿಂದ ಪಹಿಜ ಹಾರ್ (ಹಿಂದಿ)

ಅಪೇರ—
16-11-51 ರಿಂದ
ಬಿಜ್ಲಿ Bijli
(ಹಿಂದಿ) [ದಿನ 3 ಆಟಗಳು
ಪಾತ್ರ- ದೇಹನಾ, ಸಿತಾರ್, ಮೇಶಗುಪ್ತ
ಬೆಳಗಿನ ಪ್ರದರ್ಶನ 16-11-51 ರಿಂದ
ಮು ಜ್ರಿ ಮ್ (ಹಿಂದಿ)

ಉಡ್‌ಲಾಂಡ್
ಯಶಸ್ವಿ 3 ನೇ ವಾರ
ಐನಾ ಪಿಕ್ಚರ್ಸ್‌ರವರ
ಸುಮನೋಹರ ಸಾಮಾಜಿಕ ಹಿಂದಿ ಚಿತ್ರ
ಗುಮಾಸ್ತ
ಪಾತ್ರ— ನಿಗಾರ್, ವಾಸ್ತ,
ಮಿಜರ್ ಮುಷ್ರಾಫ್, ಕುಲದೀಪ್

Edited, Printed and Published by Dharma Prachara Nirata M. S. Krishna Rao. at the Satvavadi Press Chamrajpuram Mysore

16-11-51 ರಿಂದ ಅಮೋಘ ಆರಂಭ
ಮೋತಿಲಾಲ್ ಶ್ರೀಲಕ್ಷ್ಮಿ
.... ಚಿತ್ರಮಂದಿರಗಳಲ್ಲಿ ....
ಜ್ಞಾನಾಂಬಿಕಾರವರ ಅತ್ಯಮೋಘ ತೆಲುಗು ಚಿತ್ರ
ಮಂತ್ರದಂಡಂ
ಆಶ್ಚರ್ಯ ದೃಶ್ಯಗಳಿಂದಲೂ, ರೋಮಾಂಚಕ ಸನ್ನಿವೇಶಗಳಿಂದಲೂ ನಿಮ್ಮನ್ನು ಮುಗ್ಧಗೊಳಿಸುವ ಅಮೋಘ ಚಿತ್ರ

ಭೂವಿಕೆಯಲ್ಲಿ— * ನಾಗೇಶ್ವರರಾವ್ * ಸಿ ಎಸ್ ಆರ್ * ಲಿಂಗಮೂರ್ತಿ * ಶಿವರಾವ್
* ಶ್ರೀರಂಜಿನಿ * ಜಯಮ್ಮ * ಬಾಲಸರಸ್ವತಿ * ಕೃಷ್ಣಕುಮಾರಿ
— ಪ್ರತಿ ದಿನ 3 ಆಟಗಳು —
ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು 3 ವಾರಗಳು ಮನ್ನಾಮಾಡಿರುತ್ತೆ
— R. V. PICTURES Release